**ಹೆಚ್ಚುವರಿ ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ ಚಿಂಚೋಳಿ**

**ಸಿಸಿ ನಂ. 204/2019**

| | | | |
|---|---|---|---|
| **ಹೆಸರು** | **:** | **ಪಾರ್ವತಿ** | ಚಾ.ಸಾ.1 |
| **ಗಂಡನ ಹೆಸರು** | **:** | **ಅಶೋಕ** | ಪ್ರಾ.ಸಾ. 1 |
| **ವಯಸ್ಸು** | **:** | **41 ವರ್ಷ** | ದಿನಾಂಕಃ 23-11-2024 |
| **ಉದ್ಯೋಗ** | **:** | **ಕೂಲಿ ಕೆಲಸ** | |
| **ವಾಸಸ್ಥಳ** | **:** | **ಮುಂಬೈ** | |

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರಿಂದಃ**

ಚಾಸಾ 4 ನನ್ನ ತಮ್ಮ. ಚಾಸಾ 2, 3, 5 ಮತು 6 ರವರು ನನಗೆ ಗೊತ್ತು. ಆರೋಪಿತರು ನಮ್ಮ ಪಕ್ಕದ ಮನೆಯವರು.

ಈಗ 5 ವರ್ಷಗಳ ಹಿಂದೆ ಸಂಜೆ 4 ಗಂಟೆ ಸುಮಾರಿಗೆ ನಾನು ಮನೆಯಲ್ಲಿದ್ದಾಗ ನನ್ನ ತಮ್ಮನಾದ ಚಾಸಾ 4 ರವರು ಕೂಲಿ ಕೆಲಸ ಮಾಡಿಕೊಂಡು ಮನೆಗೆ ಬರುತ್ತಿದ್ದರು. ಆಗ 2ನೇ ಆರೋಪಿ ಚಾಸಾ 4 ರವರಿಗೆ ಬೋಸುಡಿ ಮಗನೇ ಈ ಜಾಗದಲ್ಲಿ ಯಾಕೆ ಹೋಗುತ್ತಿದ್ದೀಯಾ ಎಂದು ಅವಾಚ್ಯ ಶಬ್ದಗಳಿಂದ ಬೈದು ಆದ್ದರಿಂದ 1 ಮತ್ತು 2ನೇ ಆರೋಪಿತರು ಚಾಸಾ 4 ರವರ ಜೊತೆ ಕುಸ್ತಿಗೆ ಬಿದ್ದು ಅವರ ಹೊಟ್ಟೆಗೇ ಹೊಡೆಯುತ್ತಿದ್ದರು. ಆಗ ನಾನು ಬಿಡಿಸಲು ಹೋದಾಗ 3ನೇ ಆರೋಪಿತಳು ಕಲಿನಿಂದ ನನ್ನ ಬಲಗೈಗೆ ಹೊಡೆದ ಕಾರಣ ರಕ್ತಗಾಯವಾಗಿರುತ್ತದೆ. ನಂತರ ಚಾಸಾ 6 ರವರು ಬಿಡಿಸಲುಬಂದಾಗ ಆರೋಪಿತರು ನಮಗೆ ಈ ಬಾರಿ ಬಿಡುತ್ತಿದ್ದೇವೆ ಇನ್ನು ಮುಂದೆ ಕಲಾಸ ಮಾಡುತೆತೇವೆ ಎಂದು ಬೆದರಿಕೆ ಹಾಕಿರುತ್ತಾರೆ. ಆ ಸಮಯಕ್ಕೆ ಚಾಸಾ 2 ಮತ್ತು 5 ರವರು ಸಹ ಇದ್ದರು. ನಂತರ ನಾವು ಗುಲ್ಬರ್ಗಾ ಸರಕಾರಿ ಆಸ್ಪತ್ರೆಗೆ ಹೋಗಿ ಸೇರಿಕೆ ಆಗಿರುತ್ತೇವೆ. ಆಗ ಪೋಲಿಸರು ಬಂದು ಘಟನೆ ಬಗ್ಗೆ ಕೇಳಿದಾಗ ಆಗ ನನ್ನ ಹೆಬ್ಬೆರಳಿನ ಗುರುತನು ಪಡೆದಿದ್ದಾರೇ.

ಈಗ ನೋಡುತ್ತಿರುವ ದಾಖಲೆಯಲ್ಲಿರುವ ಹೆಬ್ಬೆರಳಿನ ಗುರುತು ನನ್ನದೇ. ಸದರಿ ದಾಖಲೆಯನ್ನು ನಿಪಿ 1 ಎಂದು ಗುರುತಿಸಲಾಯಿತು. ಆ ದಿನ ಆರೋಪಿತರು ನನಗೆ ಹಲ್ಲೆ ಮಾಡಲು ಬಳಸಿರುವ ಕಲ್ಲನ್ನು ಈಗ ನೋಡುತ್ತಿದು ಅದನ್ನು ಮು.ಮಾ. 1 ಎಂದು ಗುರುತಿಸಲಾಯಿತು.

ಘಟನೆ ಸಮಯಕ್ಕೆ 2ನೇ ಆರೋಪಿ ಚಾಸಾ 4 ರವರಿಗೆ ಬಡಿಗೆಯಿಂದ ಹೊಟ್ಟೆಗೆ ಮತ್ತು ಕೈಗೆ ಹೊಡೆದಿರುತ್ತಾರೆ. ಸದರಿ ಬಡಿಗೆಯನ್ನು ಈಗ ನೋಡುತ್ತಿದು ಅದನ್ನು ಮು.ಮಾ. 2 ಎಂದು ಗುರುತಿಸಲಾಯಿತು.

ಘಟನೆ ನಡೆದು 2 ರಿಂದ 3 ದಿನಗಳ ನಂತರ ಪೋಲಿಸರು ಊರಿನ ರೋಡಿಗೆ ಬಂದು ಪಂಚನಾಮೆ ಮಾಡಿರುತ್ತಾರೆ.

ಈಗ ನೋಡುತ್ತಿರುವ ಭಾವಚಿತ್ರದಲ್ಲಿ ನಾನು ಇದ್ದೇನೆ. ಸದರಿ ಭಾವಚಿತ್ರವನ್ನು ನಿಪಿ-2 ಎಂದು ಗುರುತಿಸಲಾಯಿತು. ಸದರಿ ಭಾವಚಿತ್ರವನ್ನು ಪಂಚನಾಮೆ ಮಾಡಲು ಬಂದಾಗ ಪೋಲಿಸರು ಪಡೆದಿದ್ದಾರೆ.

**ಪಾಟೀ ಸವಾಲುಃ ಆರೋಪಿ ಪರವಾಗಿ ಶ್ರೀ KVB ವಕೀಲರಿಂದಃ**

ನಾಗೂರುದಲ್ಲಿ ಎಷ್ಟು ವರ್ಷ ಉಳಿದುಕೊಂಡಿದ್ದೀರಾ ಎಂದು ಪ್ರಶ್ನಿಸಿದಾಗ ಸಾಕ್ಷಿ ನಾನು ಮುಂಬೈನಲ್ಲಿ ವಾಸವಿದ್ದೇನೆ ಎಂದು ನುಡಿಯುತ್ತಾರೆ. ನಾಗೂರು ಗ್ರಾಮದಲ್ಲಿ ನನಗೆ ಸೇರಿರುವ ಮನೆ ಇಲ್ಲ. ನನ್ನ ಭಾವನ ಹೆಂಡತಿಯರು ಮುಂಬೈನಲ್ಲಿಯೇ ವಾಸವಿದ್ದಾರೆ. ನಾನು ದುತ್ತರಗಾ ಗ್ರಾಮಕ್ಕೆ ಬಂದು ಈಗ 20 ವರ್ಷಗಳಾಗಿವೆ. 20 ವರ್ಷಗಳಿಂದ ನೀವು ತವರು ಮನೆಯಲ್ಲಿಯೇ ಇದ್ದೀರಾ ಎಂದು ಪ್ರಶ್ನಿಸಿದಾಗ ಸಾಕ್ಷಿ ಆಗಾಗ ಬಂದಾಗ ನಾನು ಬೇರೆ ಮನೆಯಲ್ಲಿ ವಾಸವಿರುತ್ತೇನೆ ಎಂದು ನುಡಿಯುತ್ತಾರೆ. ನನ್ನ ಮನೆಗೆ ಮತ್ತು ನನ್ನ ತಂದೆ ಮನೆಗೆ ಎಷ್ಟು ದೂರ ಇದೆ ಎಂದು ಪ್ರಶ್ನಿಸಿದಾಗ ಸಾಕ್ಷಿ ಸ್ವಲ್ಪ ದೂರ ಇದೆ ಎಂದು ನುಡಿಯುತ್ತಾರೆ. ನನ್ನ ತಂದೆ ಮನೆ ಮತ್ತು 2ನೇ ಆರೋಪಿ ಮನೆ ಹತ್ತಿರ ಇವೆ ಎಂದರೆ ಸರಿ. ಘಟನೆ ನಡೆದಾಗ ನಾನು ನನ್ನ ತಾಯಿ ಮನೆಯಲ್ಲಿ ಇದೆ. ನಾನು ತವರು ಮನೆಗೆ ಹೋದಾಗ ಸಾಯಂಕಾಲ 4 ಗಂಟೆ ಆಗಿತ್ತು. ದಸರಾ ಹಬ್ಬದ ಪ್ರಯುಕ್ತ ಮನೆಗೆ ಸುಣ್ಣ ಹಚ್ಚಲು ನನ್ನ ತವರು ಮನೆಗೆ ಹೋಗಿದ್ದೆ. ನನ್ನ ತಂದೆಗೆ ಒಟ್ಟು 10 ಜನ ಮಕ್ಕಳು ಇದ್ದಾರೆ. 2ನೇ ಆರೋಪಿಗೆ 1ನೇ ಆರೋಪಿ ಮಾತ್ರ ಮಗ ಎಂದರೆ ಸರಿ. ನನ್ನ ಸಹೋದರಿಯರು ಸಹ ದುತ್ತರಗಾ ಗ್ರಾಮದಲ್ಲಿಯೇ ವಾಸವಿದ್ದಾರೆ ಎಂದರೆ ಸರಿ. ಆರೋಪಿತರು ಮತ್ತು ನನ್ನ ತಂದೆಯ ಮಧ್ಯೆ ಜಮೀನಿನ ಜಗಳ ಈಗ 10 ವರ್ಷಗಳಿಂದ ಇದೆ.

ನಾನು ದೂರು ನೀಡಿದ 1 ರಿಂದ 2 ತಿಂಗಳಲ್ಲೇ ನನ್ನ ತಂದೆ ಆರೋಪಿತರ ವಿರುದ್ಧ ಇನ್ನೊಂದು ಪ್ರಕರಣ ದಾಖಲಿಸಿದ್ದಾರೆ ಎಂದರೆ ಸರಿ. ನನ್ನ ಸಹೋದರಿ ಸಹ ಆರೋಪಿತರ ವಿರುದ್ಧ ಪ್ರಕರಣ ದಾಖಲಿಸಿದ್ದಾರೆ ಎಂದರೆ ಸರಿ. ಚಾಸಾ 4 ರವರು ಬರುವ ಸಮಯಕೆ ಆರೋಪಿತರು ಅವಾಚ್ಯ ಅಬ್ದಗಳಿಂದ ಬೈದಿರುವ ಬಗ್ಗೆ, ಹೊಟ್ಟೆಗೆ ಹೊಡೆದಿರುವ ಬಗ್ಗೆ, ಕಲ್ಲಿನಿಂದ ಹೊಡೆದ ಬಗ್ಗೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ದುತ್ತರಗಾ ಗ್ರಾಮದಲ್ಲಿ ಮು.ಮಾ 1 ತರಹದ ಕಲ್ಲುಗಳು ಬಹಳ ಇವೆ ಎಂದರೆ ಸರಿ. ನಮ್ಮದು ದೊಡ್ಡ ಕುಟುಂಬವಾಗಿದ್ದು ನಮ್ಮ ಕುಟುಂಬದಲ್ಲಿ 10 ರಿಂದ 15 ಜನ ಇದ್ದೇವೆ ಎಂದರೆ ಸರಿ. ಆರೋಪಿತರಿಗೆ ಊರು ಬಿಡಿಸಿದರೆ ಅವರ ಜಮೀನು ಪಡೆದುಕೊಳ್ಳಬೇಕು ಎಂಬ ಉದ್ದೇಶದಿಂದ ಹಲವಾರು ಪ್ರಕರಣಗಳನ್ನು ದಾಖಲಿಸುತ್ತಿದೇವೆ ಎಂದರೆ ಸರಿಯಲ್ಲ.

ಆಸ್ಪತ್ರೆಯಲ್ಲಿ ಬಿಟ್ಟು ಬೇರೆ ಯಾವುದೇ ದಿನ ಪೊಲಿಸರು ನನ್ನ ಹೇಳಿಕೆ ಪಡೆದಿಲ್ಲ. 2ನೇ ಆರೋಪಿ 8-10 ವರ್ಷಗಳಿಂದ ಸುಲೇಪೇಟ ಗ್ರಾಮದಲ್ಲಿ ವಾಸವಿದ್ದಾನೆ. 2ನೇ ಆರೋಪಿ ಮಕ್ಕಳು ಸಹ ಸುಲೇಪೇಟನಲ್ಲಿ ವಾಸವಿದ್ದಾರೆ ಎಂದರೆ ಸಾಕ್ಷಿ ಆಗಾಗ ನಮ್ಮ ಊರಿಗೆ ಬಂದು ಹೋಗುವುದು ಮಾಡುತ್ತಾರೆ ಎಂದು ನುಡಿಯುತ್ತಾರೆ. ನಾವು ಆರೊಪಿತರು ವಿರುದ್ದ ಸುಳ್ಳು ಪ್ರಕರಣ ದಾಖಲಿಸಿದ ಕಾರಣ ಅವರು ಊರು ಬಿಟ್ಟು ಸುಲೇಪೇಟನಲ್ಲಿ ವಾಸವಿದ್ದಾರೆ ಎಂದರೆ ಸರಿಯಲ್ಲ. ನಮ್ಮ ಊರಿನಿಂದ ಕಾಳಗಿ ಹತ್ತಿರ ಇದೆ ಎಂದರೆ ಸರಿ. ಕಾಳಗಿಯಲ್ಲಿ ಆಸ್ಪತ್ರೆ ಇರುವ ಬಗ್ಗೆ ನನಗೆ ಗೊತ್ತಿಲ್ಲ. ನನಗೆ ಯಾವುದೇ ಗಾಯ ಆಗದೇ ಇದ್ದರೂ ಸಹ ಸುಳ್ಳು ಪ್ರಕರಣ ದಾಖಲಿಸಿದೇನೆ ಎಂದರೆ ಸರಿಯಲ್ಲ. 2 ಮತ್ತು 3ನೇ ಆರೋಪಿರಿಗೆ ಒಬ್ಬಳು ಮಗಳು ಇದ್ದಾಳೆ ಎಂದರೆ ಸರಿ. 2 ಮತ್ತು 3ನೇ ಆರೋಪಿರ ಮಗಳು ಗುಲ್ಬರ್ಗಾದಲ್ಲಿ ವಾಸವಿದ್ದಾಳೆ ಎಂದರೆ ಸರಿ. ಅವರ ಗಂಡನಿಗೆ ಕರೆಂಟ ತಗಲಿ ಕಾಲುಗಳು ಹೋಗಿವೆ ಎಂದರೆ ಸರಿ. ಸದರಿ ಮಹಿಳೆ ವಿರುದ್ದ ಸಹ ನನ್ನ ತಂದೆ ಪ್ರಕರಣ ದಾಖಲಿಸಿದ್ದಾರೆ ಎಂದರೆ ಸರಿ.

ಮು.ಮಾ. 2 ತರಹದ ಬಡಿಗೆ ಖರೀದಿ ಮಾಡಿ ತರಬೇಕಾಗುತ್ತದೆ ಎಂದರೆ ಸಾಕ್ಷಿ ಆರೋಪಿತರು ಮನೆಯಲ್ಲಿ ಇತ್ತು ಎಂದು ನುಡಿಯುತ್ತಾರೆ. ಜಗಳ ರೋಡಿನ ಮೇಲೆ ಆಗಿದೆ. ಸದರಿ ರೋಡು ಆರೋಪಿತರ ಮನೆಹತ್ತಿರ ಇದೆ. ನಾನು ಆರೋಪಿತರಿಗೆ ಬೈದು ಅವರ ವಿರುದ್ದ ಸುಳ್ಳು ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲಾ.**

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

**C/C ಹೆಚ್ಚುವರಿ ಪ್ರ.ದ.ನ್ಯಾ.ದಂ. ಚಿಂಚೋಳಿ**